ಸಂಖ್ಯೆ:ಕಾಶಿಆ/01/2016/17/ಎನ್.ಪಿ.ಎಸ್./ಹಪಾವಿ,

ಕಾಲೇಜು ಶಿಕ್ಷಣ ಆಯುಕ್ತರಕಛೇರಿ,
ಬೆಂಗಳೂರು, ದಿನಾಂಕ: 09/12/2016.

## ಸುತ್ತೋಲೆ

ವಿಷಯ:- ಎನ್.ಪಿ.ಎಸ್. ನೌಕರರ ಸರಿಯಾದ ಮೂಲವೇತನ ಮತ್ತುಇತರ ವಿವರಗಳೊಂದಿಗೆ ಅಪ್ರೂವ್ ಮಾಡಲಾದ ಷೆಡ್ಯೂಲ್ 4 ಮತ್ತು 5 ಗಳನ್ನು ಎನ್.ಪಿ.ಎಸ್. ಘಟಕಕ್ಕೆ ಸಲ್ಲಿಸುವ ಬಗ್ಗೆ.

ಉಲ್ಲೇಖ:- 1) ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು ಇವರ ದಿನಾಂಕ: 28-11-2016ರ ಪತ್ರ ಸಂಖ್ಯೆ: ಖನಿ/ಎನ್/ಪಿ.ಎಸ್./14/2010-11.

2) ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಆ/01/2016/17/ಎನ್.ಪಿ.ಎಸ್./ಹಪಾವಿ, ದಿನಾಂಕ:01/12/2016.

ಉಲ್ಲೇಖ (1) ರನ್ವಯ ದಿನಾಂಕ: 6/12/2016 ರಂದು ಎನ್.ಪಿ.ಎಸ್. ನೌಕರರ ಸರ್ಕಾರಿ ಬ್ಯಾಕ್‌ಲಾಗ್‌ಗೆ ಸಂಬಂಧಿಸಿದಂತೆ ನಡೆದ ಸಭೆಯಲ್ಲಿ ಸರ್ಕಾರಿ ಬ್ಯಾಕ್‌ಲಾಗ್ ಗೆ ಸಂಬಂಧಿಸಿದಂತೆ ಷೆಡ್ಯೂಲ್ 4 ಮತ್ತು 5 ನ್ನುಎನ್.ಪಿ.ಎಸ್. ಘಟಕಕ್ಕೆ ಸಲ್ಲಿಸಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಇನ್ನೂ ಕೆಲವು ಸಿಬ್ಬಂದಿಗಳು ಇದುವರೆವಿಗೂ ಸಲ್ಲಿಸಿರುವುದಿಲ್ಲ. ಆದಕಾರಣ ಸರ್ಕಾರದಆದೇಶ ಸಂಖ್ಯೆ:ಎಫ್.ಡಿ(ಎಸ್.ಪಿ.ಎಲ್) 176 ಪಿಇಎನ್ 2014, ದಿನಾಂಕ: 05/05/2016 ರಲ್ಲಿ ಸರ್ಕಾರದ ಬ್ಯಾಕ್‌ಲಾಗ್ ಮೇಲಿನ ಬಡ್ಡಿಯನ್ನು ದಿನಾಂಕ: 30/06/2016ರ ಅಂತ್ಯಕ್ಕೆ ಸ್ಥಗಿತಗೊಳಿಸಲು ಆದೇಶಿಸಲಾಗಿದೆ. ನಂತರ ಸರ್ಕಾರಿ ಬ್ಯಾಕ್‌ಲಾಗ್ ವಂತಿಗೆ ಮತ್ತು ಬ್ಯಾಕ್ ಲಾಗ್ ವಂತಿಗೆ ಮೇಲೆ ದಿನಾಂಕ: 30/06/2016ರ ವರೆಗೆ ಸ್ಥಗಿತಗೊಳಿಸಲು ಸರ್ಕಾರದ ಹಂತದಲ್ಲಿಚರ್ಚೆ ನಡೆಸಲಾಗುತ್ತಿರುತ್ತದೆ. ಸರ್ಕಾರದ ತೀರ್ಮಾನದ ನಂತರ ನೌಕರರಿಂದ ಬ್ಯಾಕ್‌ಲಾಗ್ ವಂತಿಗೆ ಮತ್ತು ಬಡ್ಡಿ ಪಾವತಿಗೆ ಕೋರಿಕೆ ಬಂದಲ್ಲಿ ಅದನ್ನು ಇತ್ಯರ್ಥಪಡಿಸುವುದಕ್ಕೆ ಸಂಬಂಧಪಟ್ಟ ಡಿ.ಡಿ.ಓ.ಗಳೇ ವೈಯಕ್ತಿಕ ಜವಾಬ್ದಾರರಾಗಿರುತ್ತಾರೆಂದು ತಿಳಿಸಲಾಗಿದೆ.

ಈ ಸಂಬಂಧ ಈ ಇಲಾಖೆಯಲ್ಲಿ ಇದುವರೆವಿಗೂ ಬ್ಯಾಕ್‌ಲಾಗ್‌ಗೆ ಸಂಬಂಧಿಸಿದಂತೆ ಷೆಡ್ಯೂಲ್ 4 ಮತ್ತು 5 ಗಳನ್ನು ಜನರೇಟ್ ಮಾಡದೆ ಇರುವವರು ಹಾಗೂ Non-IRA ಪಟ್ಟಿಯನ್ನು ನೀಡಲಾಗಿದ್ದು (ಈ ಪತ್ರಕ್ಕೆ ಲಗತ್ತಿಸಿದ್ದು), ಸಂಬಂಧಪಟ್ಟ ಡಿಡಿಓಗಳು ಇದನ್ನು ಪರಿಶೀಲಿಸಿ ಸರಿಯಾದ ಮೂಲ ವೇತನ ಮತ್ತು ಇತರ ವಿವರಗಳೊಂದಿಗೆ ಅಪ್ರೂವ್ ಮಾಡಲಾದ ಷೆಡ್ಯೂಲ್ 4 ಮತ್ತು 5 ಗಳನ್ನು ಎನ್.ಪಿ.ಎಸ್. ಘಟಕಕ್ಕೆ ಕೂಡಲೇ ತಪ್ಪದೇ ಸಲ್ಲಿಸಲು ಸೂಚಿಸಲಾಗಿದೆ. ತಪ್ಪಿದಲ್ಲಿ, ಸಂಬಂಧಿಸಿದ ಡಿ.ಡಿ.ಓ.ಗಳೇ ನೇರ ಜವಾಬ್ದಾರರಾಗಿರುತ್ತಾರೆಂದು ತಿಳಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು.

ಇವರಿಗೆ

1. ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರಿಗೆ
2. ಇಲಾಖಾವ್ಯಾಪ್ತಿಯಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ
3. ಲೆಕ್ಕಾಧಿಕಾರಿಗಳು, ಕಾಲೇಜು ಶಿಕ್ಷಣ ಕೇಂದ್ರಕಛೇರಿ, ಬೆಂಗಳೂರು.

ಪ್ರತಿಯನ್ನು

1. ಕಾಲೇಜು ಶಿಕ್ಷಣ ಆಯುಕ್ತರ / ನಿರ್ದೇಶಕರ / ಮುಖ್ಯ ಆಡಳಿತಾಧಿಕಾರಿಗಳ ಆಪ್ತಶಾಖೆಗೆ ಮಾಹಿತಿಗಾಗಿ
2. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಎನ್.ಪಿ.ಎಸ್. ಘಟಕ, 8ನೇ ಮಹಡಿ,ವಿಶ್ವೇಶ್ವರಯ್ಯಗೋಪುರ, ಬೆಂಗಳೂರು. - ಇವರ ಮಾಹಿತಿಗಾಗಿ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು- ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು